# ವಿದೇಶಿ ವಿವಿ ಜತೆ ಅಮೃತಾ ವಿದ್ಯಾಪೀಠದ 'ಸಂಯೋಗ'

**ಬೆಂಗಳೂರು:** ಮಾತಾ ಅಮೃತಾನಂದಮಯಿ ವಿದ್ಯಾಪೀಠಂ, ಭಾರತ ಮತ್ತು ಯೂರೋಪ್ ಸಹಭಾಗಿತ್ವದಲ್ಲಿ 'ಸಂಯೋಗ' ಎಂಬ ನೂತನ ಸಂಶೋಧನಾ ಕೋರ್ಸ್‌ಗಳನ್ನು ಆರಂಭಿಸಿದ್ದು ಈ ಸಂಬಂಧ ಮಂಗಳವಾರ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಕೃಷಿ ಮತ್ತು ಪರಿಸರ, ನಗರ ಯೋಜನೆ ಮತ್ತು ಎಂಜಿನಿಯರಿಂಗ್, ವೈದ್ಯಕೀಯ ವಿಜ್ಞಾನ ಮತ್ತು ಆರೋಗ್ಯ ರಕ್ಷಣೆ, ಸಮಾಜ ವಿಜ್ಞಾನ ಹಾಗೂ ಮಾನವೀಯತೆ, ವಾಣಿಜ್ಯ ಮತ್ತು ನಿರ್ವಹಣೆ ಕುರಿತ ವಿಷಯಗಳ ಮೇಲೆ ಸಂಶೋಧನೆ ನಡೆಸಲು ಅಮೃತಾನಂದಮಯಿ ಪೀಠ ಅವಕಾಶ ಕಲ್ಪಿಸಿದೆ. ಕಾರ್ಯಕ್ರಮದಲ್ಲಿ ಯೂರೋಪ್‌ನ 8 ವಿಶ್ವವಿದ್ಯಾಲಯಗಳ 40 ಪ್ರತಿನಿಧಿಗಳು ಹಾಗೂ ಭಾರತದ 12 ವಿಶ್ವವಿದ್ಯಾಲಯಗಳ 100 ಪ್ರತಿನಿಧಿಗಳು ಭಾಗವಹಿಸಿದ್ದರು. ಏ.4ರವರೆಗೆ ಕಾರ್ಯಕ್ರಮ ನಡೆಯಲಿದೆ.



ಭಾರತ ಮತ್ತು ಯುರೋಪ್ ದೇಶಗಳಲ್ಲಿರುವ ಮೂಲಭೂತ. ಸಮಸ್ಯೆಗಳನ್ನು ಸಂಸ್ಕೃತಿ ವಿನಿಮಯ ಮೂಲಕ ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಸಂಯೋಗ (ಇಂಡಿಯಾ ಪ್ಲ್ಯಾಟ್ ಫಾರ್ಮ್) ಪ್ರಾರಂಭಿಸಲಾಗುತ್ತಿದೆ. ಭಾರತದ ಉದ್ಯೋಗಿಗಳು ವಿದೇಶಿ ಕಂಪನಿಗಳ ಬೆನ್ನೆಲುಬಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಹೀಗಾಗಿ, ಸಂಶೋಧನೆಯಲ್ಲಿ ತೊಡಗುವವರ ಕೊರತೆ ಭಾರತದಲ್ಲಿ ಹೆಚ್ಚು ಕಂಡುಬಂದಿದೆ. ಯುರೋಪ್ ರಾಷ್ಟ್ರದ ಶಿಕ್ಷಣ ಪದ್ಧತಿ ವಿನಿಮಯ, ಪಠ್ಯ ವಿನಿಮಯ, ಮಾಹಿತಿ ವಿನಿಮಯದೊಂದಿಗೆ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಮನ್ನಣೆ ನೀಡುವುದು ಪ್ರಮುಖ ಉದ್ದೇಶವಾಗಿದೆ ಎನ್ನುತ್ತಾರೆ ಯೋಜನಾ ಮುಖ್ಯಸ್ಥ ಎಸ್. ಎನ್.ಬಾಲಗಂಗಾಧರ್.

ನೆದರ್‌ಲ್ಯಾಂಡ್ ಪ್ರತಿನಿಧಿ ಎಲ್ಲೆ ನಿದಮ್ ಮಾತನಾಡಿ, ಭಾರತದಲ್ಲಿ 300 ದಶಲಕ್ಷ ಮಂದಿ ಬಡತನ ರೇಖೆಗಿಂತ ಕೆಳಗಿದ್ದಾರೆ. ಬಡತನ ಸಮಸ್ಯೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಪರಿಹರಿಸಲು ಸಂಶೋಧನೆಗಳ ಅವಶ್ಯಕತೆ ಇದೆ ಎಂದರು. ಅಮೃತಾ ವಿಶ್ವವಿದ್ಯಾಲಯದ ಉಪಕುಲಪತಿ ಡಾ।ಪಿ.ವಿ.ವೆಂಕಟರಂಗನ್, ಬೆಲ್ಜಿಯಂ ರಾಯಭಾರಿ ಕಚೇರಿ ಸಲಹೆಗಾರ ಆಂಟನಿ ಎವ್ರಾಡ್ ಮಾತನಾಡಿದರು.

**ಭಾರತದ ಪಾಲುದಾರಿಕೆ ಶಿಕ್ಷಣ ಸಂಸ್ಥೆಗಳು**

- ಆಳ್ವಾಸ್ ಶಿಕ್ಷಣ ಟ್ರಸ್ಟ್, ಮೂಡುಬಿದರೆ
- ಅಮೃತಾ ವಿಶ್ವವಿದ್ಯಾಲಯ, ತಮಿಳುನಾಡು, ಕೇರಳ, ಕರ್ನಾಟಕ ಕ್ಯಾಂಪಸ್
- ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು, ಬೆಂಗಳೂರು
- ಬಿ.ಎನ್.ಎಂ. ತಾಂತ್ರಿಕ ಸಂಸ್ಥೆ, ಬೆಂಗಳೂರು
- ಗೋಕುಲ ಶಿಕ್ಷಣ ಪ್ರತಿಷ್ಠಾನ, ಬೆಂಗಳೂರು
- ವಾಣಿಜ್ಯ ಮತ್ತು ಅಂತಾರಾಷ್ಟ್ರೀಯ ಆಡಳಿತ, ಬೆಂಗಳೂರು
- ಜ್ಯೋತಿ ಗ್ರೂಪ್, ಬೆಂಗಳೂರು
- ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ
- ಕೃಷಿ ಪಶು ವಿಶ್ವವಿದ್ಯಾಲಯ, ಬೀದರ್
- ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು
- ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು

**ಯೂರೋಪ್‌ನ ಪಾಲುದಾರಿಕೆ ವಿಶ್ವವಿದ್ಯಾಲಯಗಳು**

- ಗೇಂಟ್ ವಿಶ್ವವಿದ್ಯಾಲಯ, ಗೇಂಟ್ ವಿಶ್ವವಿದ್ಯಾಲಯ ಆಸ್ಪತ್ರೆ, ಎನ್.ಪಿ. ಬ್ರಿಡ್ಜಿಂಗ್, ಅಂಟ್ವೆರ್ಪ್ ವಿ.ವಿ. - ಬೆಲ್ಜಿಯಂ
- ಪರ್ಡುಬೀಸ್ ವಿಶ್ವವಿದ್ಯಾಲಯ, ಚೆಕ್ ಗಣರಾಜ್ಯ
- ಅವ್ವೈರೊ ವಿಶ್ವವಿದ್ಯಾಲಯ, ಪೋರ್ಚುಗಲ್
- ಗ್ರೋನಿನ್ ವಿಶ್ವವಿದ್ಯಾಲಯ, ನೆದರ್‌ಲ್ಯಾಂಡ್